**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ.487/2019

ಸಿ.ಡಬ್ಲೂಃ 1 ಪಿ.ಡಬ್ಲೂಃ 1

ಹೆಸರುಃ ಮೈಲಾರಪ್ಪ

ತಂದೆಯ ಹೆಸರುಃ ನೀಲಪ್ಪ ಚಿಕ್ಕಣ್ಣವರ

ವಯಸ್ಸುಃ 36 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ಮೆಣಸಗಿ , ತಾಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 06-07-2022 ರಂದು ಪ್ರಮಾಣೀಕರಿಸಲಾಯಿತು.**

**ಸಾಕ್ಷಿಯು ಬೇರೆ ಊರಿಂದ ಈ ದಿನ ಬಂದಿರುವುದರಿಂದ , ಹಾಗೂ ಸಾಕ್ಷಿಯು ಸಾಕ್ಷಿ ಹೇಳಲು ಸಿದ್ಧನಿರುತ್ತೇನೆ ಎಂದು ಹೇಳಿರುವುದರಿಂದ, ಕಲಂ 309 ಸಿ ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷಿಯ ವಿಚಾರಣೆಯನ್ನು ಕೈಗೆತ್ತಿಕೊಳ್ಳಲಾಯಿತು.**

**ಮುಖ್ಯ ವಿಚಾರಣೆಃ- ಸಾಕ್ಷಿ ಸ್ವತ**

1. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನ್ನ ಕಾಕಾ ಮತ್ತು ಅವರ ಮಕ್ಕಳು. ದಿಃ 20-10-2018 ರಂದು ಮೆಣಸಗಿ ಗ್ರಾಮದ ಸರ್ವೇ ನಂ229 ಜಮೀನನ್ನು ಬಿತ್ತನೆ ಮಾಡಲು ನಾನು ಮತ್ತು ನನ್ನ ತಂದೆ ನೀಲಪ್ಪ ಕೂಡಿಕೊಂಡು ಹೋಗಿ , ರಾತ್ರಿ 8-00 ಗಂಟೆಗೆ ನಮ್ಮ ಮನೆ ಮುಂದೆ ಕುಳಿತಿದ್ದಾಗ, ಆರೋಪಿತರಾದ ರಾಮಪ್ಪ , ಮಲಕಾಜಪ್ಪ, ಪಾರವ್ವ , ಪ್ರವೀಣ,ಉಮೇಶ, ಮುತ್ತವ್ವ ಮತ್ತು ಮುತ್ತಪ್ಪ ಒಟ್ಟು 7 ಜನ ಅಲ್ಲಿಗೆ ಬಂದು ನಮ್ಮ ಹೊಲವನ್ನುಏಕೆ ಬಿತ್ತುತ್ತೀರಿ ಸೂಳೆ ಮಕ್ಕಳಾ ಎಂದು ನಮಗೆ ಬೈಯಲು ಶುರು ಮಾಡಿದರು. ನಾವು ಏಕೆ ಬೈಯುತ್ತೀರಿ ಎಂದು ಕೇಳಿದಾಗ, ಆರೋಪಿತನಾದ ಮುತ್ತಪ್ಪ ಬಡಿಗೆಯಿಂದ ನನ್ನ ಎಡಗೈಗೆ ಹೊಡೆದ, ಮುತ್ತವ್ವ ನನಗೆ ಚಪ್ಪಲಿ ತೆಗೆದುಕೊಂಡು ನನ್ನ ಹಣೆ ಮತ್ತು ಕಪಾಳಕ್ಕೆ ಹೊಡೆದಳು. ನಂತರ ಉಳಿದ ಆರೋಪಿತರು ಎಲ್ಲರೂ ಸೇರಿ ಕೈಯಿಂದ ಹೊಡೆದರು. ಆಗ ನನ್ನ ತಂದೆ ಬಿಡಿಸಲು ಬಂದರು. ಆಗ ಪ್ರವೀಣ ನನ್ನ ತಂದೆಗೆ ಕಲ್ಲಿನಿಂದ ಅವರ ಭುಜಕ್ಕೆ ಹೊಡೆದ . ಈ ಜಗಳ ನೋಡಿನನ್ನ ತಾಯಿ ಬಂದಳು. ನನ್ನ ತಾಯಿಗೆ ಎಲ್ಲಾ ಆರೋಪಿತರು ಸೇರಿ ಕೈಯಿಂದ ಹೊಡೆದರು. ನಂತರ ನನ್ನ ಅತ್ತೆ ನಿಂಗವ್ವ ಸೂಡಿ ಅವರು ಬಂದರು. ಅವರಿಗೂ ಸಹ ಆರೋಪಿತರು ಅವಳ ಕೈ ಹಿಡಿದು ಎಳೆದಾಡಿ, ಹೊಡೆದರು.

**ಮುಂದುವರೆದ ಮುಖ್ಯ ವಿಚಾರಣೆಃ- ಸಮಯ ಕೇಳಿದ್ದು, ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)
ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ .**